299 ಶ್ರೀ ಕುಮಾರಸ್ವಾಮಿ ಕೆ.ಜಿ.
ಹೆಚ್ ಹಾಲಪ್ಪ(ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು)

1 ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಹೊಳೆಹೊನ್ನೂರು ಹೋಬಳಿ ಹಗರದ ಹಳ್ಳಿ-ಯಡಹಳ್ಳಿ ಭಾಗದ 60-70 ಗೃಹ ಬಳಕೆ ಗ್ರಾಹಕರ ಅನಿಲ ಸಿಲಿಂಡರ್‌ಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗಿದೆಯೆ;

ಹೌದು

2 ಈ ಅನಿಲ ಸಿಲಿಂಡರ್‌ಗಳ ಬಗ್ಗೆ ಗ್ರಾಹಕರು ಬೆಂಗಳೂರಿಗೆ ಜಾತಾ ಬಂದು ಮನವಿ ಸಲ್ಲಿಸಿರುವುದು ನಿಜವೇ;

ಇಲ್ಲ,

ಈ ಬಗ್ಗೆ ಕರ್ನಾಟಕ ಗ್ರಾಹಕ ಪ್ರತಿಷ್ಠಾನ ಮತ್ತು ಮಾಹಿತಿ ಹಕ್ಕು ಮಾರ್ಗದರ್ಶನ ಕೇಂದ್ರದ ಉಪಾಧ್ಯಕ್ಷರು ದಿನಾಂಕ: 10-6-2009 ರಂದು ಮನವಿಯನ್ನು ಸಲ್ಲಿಸಿ ಭದ್ರಾವತಿ ಪಿ.ಎಲ್.ಡಿ. ಬ್ಯಾಂಕ್ ಅಧ್ಯಕ್ಷರ ನೇತೃತ್ವದಲ್ಲಿ ಗ್ರಾಹಕರು ಖುದ್ದಾಗಿ ಭೇಟಿ ಮಾಡಿ ವಾಸ್ತವಾಂಶವನ್ನು ವಿವರಿಸಲು ಸಮಯಾವಕಾಶ ನೀಡುವಂತೆ ಇಲಾಖೆಯ ಆಯುಕ್ತರಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ಮಾನ್ಯ ಶಾಸಕರು ದಿನಾಂಕ: 23-6-2009 ರಂದು ಇಲಾಖೆಯ ಆಯುಕ್ತರಿಗೆ ಪತ್ರ ಬರೆದು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಅಂತಹ ಗ್ರಾಹಕರಿಗೆ ಹಿಂದಿರುಗಿಸಲು ತೆಗೆದುಕೊಂಡ ಕ್ರಮಗಳೇನು (ವಿವರ ನೀಡುವುದು)

ಭದ್ರಾವತಿ ತಾಲ್ಲೂಕು ತಹಶೀಲ್ದಾರ್ ಮತ್ತು ಸಿಬ್ಬಂದಿಯವರು ದಿನಾಂಕ:28-2-2004 ರಂದು ದಾಳಿ ನಡೆಸಿ ವಶಪಡಿಸಿಕೊಳ್ಳಲಾಗಿದ್ದ 127 ಸಿಲಿಂಡರ್‌ಗಳನ್ನು ಸರ್ಕಾರದ ಪರವಾಗಿ ಮುಟ್ಟುಗೋಲು ಹಾಕಿಕೊಳ್ಳುವಂತೆ ಶಿವಮೊಗ್ಗ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಕರ್ನಾಟಕ ಅಗತ್ಯ ವಸ್ತುಗಳ ಕಾಯ್ದೆಯಡಿ ಆದೇಶವನ್ನು ಹೊರಡಿಸಿರುತ್ತಾರೆ. ನ್ಯಾಯಾಲಯದ ತೀರ್ಪಿನನ್ವಯ ಮೇಲ್ಮನವಿ ಸಲ್ಲಿಸಿ ಪರಿಹಾರ ಪಡೆಯಲು ಅವಕಾಶವಿದೆಯೇ ವಿನಃ ಈ ಹಂತದಲ್ಲಿ ಇಲಾಖೆಯಿಂದ ಕ್ರಮ ಜರುಗಿಸಲು ಅವಕಾಶವಿರುವುದಿಲ್ಲ.

162 ಶ್ರೀ ಮಹೇಶ್ ಎಸ್.ಆರ್ (ಕೃಷ್ಣರಾಜನಗರ)
ಹೆಚ್. ಹಾಲಪ್ಪ(ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿರುವ ಸರ್ಕಾರಿ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ರಾಜ್ಯದಲ್ಲಿ ಏಪ್ರಿಲ್ 2009 ರ ಮಾಹೆಯ ಅಂತ್ಯಕ್ಕೆ 20,366 ನ್ಯಾಯಬೆಲೆ ಅಂಗಡಿಗಳಿರುತ್ತವೆ. ವಿವರ ಅನುಬಂಧ ದಲ್ಲಿ ಲಗತ್ತಿಸಿದೆ.

ಆ) ಈ ಸರ್ಕಾರಿ ನ್ಯಾಯಬೆಲೆ ಅಂಗಡಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿವೆಯೇ?

ಕಾರ್ಯನಿರ್ವಹಿಸುತ್ತಿವೆ. ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇರುವ ನ್ಯಾಯಬೆಲೆ ಅಂಗಡಿಗಳ ವಿರುದ್ಧ ಕರ್ನಾಟಕ ಅಗತ್ಯ ವಸ್ತುಗಳ ಸಾವಿಪ (ನಿಯಂತ್ರಣ) ಆದೇಶ, 1992 ರನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಹಾಗಿದ್ದಲ್ಲಿ, ಪಡಿತರ ಚೀಟಿದಾರರಿಗೆ ಸಕಾಲಕ್ಕೆ ಆಹಾರ ಪದಾರ್ಥಗಳನ್ನು ವಿತರಿಸಲಾಗುತ್ತಿದೆಯೇ;

ಹೌದು.

ಎಷ್ಟು ಪ್ರಮಾಣದಲ್ಲಿ ಪಡಿತರವನ್ನು ಹಂಚಿಕೆ ಮಾಡಲಾಗುತ್ತಿದೆ (ವಿವರ ನೀಡುವುದು)

ನ್ಯಾಯಬೆಲೆ ಅಂಗಡಿಗಳು ಸಕಾಲಕ್ಕೆ ಆಹಾರ ಪದಾರ್ಥಗಳನ್ನು ಈ ಕೆಳಕಂಡ ಪ್ರಮಾಣದಲ್ಲಿ ವಿತರಿಸಲಾಗುತ್ತಿದೆ.

ಪಡಿತರ ಚೀಟಿಯ ವಿಧ	ಅಕ್ಕಿ	ಗೋಧಿ/ರಾಗಿ	ಸಕ್ಕರೆ
	ಪ್ರಮಾಣ (ಕೆಜಿ)	ಪ್ರಮಾಣ (ಕೆಜಿ)	ಪ್ರಮಾಣ (ಕೆಜಿ)
ಎಎವೈ	29	6	1
ಅಕ್ಷಯ (ಬಿಪಿಎಲ್)	ಪ್ರತಿ ವ್ಯಕ್ತಿಗೆ 4 ಕೆಜಿಯಂತೆ ಗರಿಷ್ಟ 20 ಕೆಜಿ	ಪ್ರತಿ ವ್ಯಕ್ತಿಗೆ 1 ಕೆಜಿಯಂತೆ ಗರಿಷ್ಟ 3 ಕೆಜಿ	1

ಸೀಮೆಎಣ್ಣೆ	ಪ್ರಮಾಣ (ಲೀ)
ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	7
ಉಳಿದ ಅನೌಪಚಾರಿಕ ಪಡಿತರ ಪ್ರದೇಶ	5
ಪಟ್ಟಣ	4
ಗ್ರಾಮಾಂತರ	3

ಎಪಿಎಲ್ ಪಡಿತರ ಚೀಟಿದಾರರುಗಳಿಗೆ ಯಾವುದೇ ಆಹಾರಧಾನ್ಯ ವಿತರಣೆ ಮಾಡುತ್ತಿಲ್ಲ.

ಈ) ನ್ಯಾಯಬೆಲೆ ಅಂಗಡಿ ಪರವಾನಿಗೆದಾರರಿಗೆ ಈಗ ನೀಡುತ್ತಿರುವ ಕಮಿಷನ್ ಮೊತ್ತ ಎಷ್ಟು;

ನ್ಯಾಯಬೆಲೆ ಅಂಗಡಿ ಪರವಾನಿಗೆದಾರರಿಗೆ ಪ್ರತಿ ಕ್ವಿಂಟಾಲ್ ಅಕ್ಕಿಗೆ ರೂ.29/-, ಗೋಧಿಗೆ ರೂ.23/-, ರಾಗಿಗೆ ರೂ.23/-ರಂತೆ ಲಾಭಾಂಶ (ಸರ್ಕಾರದ ಆದೇಶ ಸಂ: ಎಫ್‌ಸಿಎಸ್:372:ಡಿಆರ್‌ಎ:05 ದಿ:4.10.2008 ರನ್ವಯ) ನೀಡಲಾಗುತ್ತಿದೆ.

ಉ) ಈಗ ನೀಡುತ್ತಿರುವ ಕಮಿಷನ್ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇಲ್ಲ.

ಊ) ಹಾಗಿದ್ದಲ್ಲಿ, ಯಾವಾಗಿನಿಂದ ಜಾರಿಗೆ ತರಲಾಗುವುದು?

ಅನ್ವಯಿಸುವುದಿಲ್ಲ.

Annexure

STATEMENT SHOWING THE DISTRICTWISE TOTAL NO.OF FAIR PRICESHOPS EXISTING IN THE STATE AS ON 30-04-09.

Sl.No.	Districts	TOTAL NO OF FAIR PRICE SHOPS
1	North Range	364
2	South Range	287
3	East Range	230
4	West Range	389
5	Central Range	92
	Bangalore IR	1362
6	Bangalore (u)	504
7	Bangalore (R)	355
8	Bagalkot	646
9	Belgaum	1664
10	Bellary	699
11	Bidar	738
12	Bijapur	797
13	Chamarajnagar	443
14	Chickballapur	563
15	Chickmagalore	601
16	Chitradurga	667
17	Davanagere	772

18	D.Kannada	533
19	Dharwad	515
20	Gadag	362
21	Gulbarga	1370
22	Haassan	854
23	Haveri	430
24	Kodagu	277
25	Kolar	639
26	Koppala	450
27	Mandya	720
28	Mysore	1065
29	Ramnagar	559
30	Raichur	679
31	Shimoga	592
32	Tumkur	1108
33	Udupi	268
34	U.Kannada	426
	TOTAL	**20366**

156 ಶ್ರೀ ನರಸಿಂಹ ನಾಯಕ (ರಾಜು ಗೌಡ)

ಕೃಷಿ ಸಚಿವರು

ಅ. ಕರ್ನಾಟಕ ಸರ್ಕಾರದಿಂದ ಚೈನಾ ಪ್ರವಾಸಕ್ಕೆ ತೆರಳಿರುವ ರೈತರ ಒಟ್ಟು ಸಂಖ್ಯೆ ಎಷ್ಟು?

ಕರ್ನಾಟಕ ಸರ್ಕಾರದಿಂದ ಚೈನಾ ಪ್ರವಾಸಕ್ಕೆ ತೆರಳಿರುವ ರೈತರ ಒಟ್ಟು ಸಂಖ್ಯೆ 633.

ಆ. ರೈತರು ಎಂದಾದರೆ ನಿಖರವಾದ ಸಂಖ್ಯೆ ಎಷ್ಟು?

ರೈತರ ನಿಖರವಾದ ಸಂ. 633.

157 ಶ್ರೀ.ನರಸಿಂಹ ನಾಯಕ (ರಾಜುಗೌಡ)

ಕೃಷಿ ಸಚಿವರು

ಅ) ರಾಜ್ಯದಲ್ಲಿ ಸಣ್ಣ ಕೃಷಿಕರಿಗೆ ಸಹಾಯ ಧನ ಆಧಾರದ ಮೇಲೆ ಬಿಡುಗಡೆ ಮಾಡಲಾದ ಅನುದಾನ ಎಷ್ಟು?